

# ರಕ್ಷಿಸದಿರಿ!

ಬೇಡ ಸೋದರಿಯರೇ
ಪ್ರತಿ ನಿತ್ಯ ದುರುಳರು
ನೂರಾರು ಹೆಂಗಳೆಯರ
ಸೆರಗೆಳೆದರೂ ಬಾರದಿರುವ
ಕರೆಗೆ ಓಗೊಡದಿರುವ
ಈ ದೇವರುಗಳಿಗೆ
ಸೀರೆ ಹೊದಿಸಿ ರಕ್ಷಿಸದಿರಿ.

ದುರುಳರ ಬೆವರ ಹನಿಗಳು
ಹೆಂಗಳೆಯರ ಮೈ ನೆನೆಸಿದಂತೆ
ದೇವರುಗಳ ಮೈಯೂ ನೆನೆಯಲಿ
ಅದರಿಂದಾದರೂ ಬುದ್ಧಿ ಕಲಿತು
ಈ ದೇವರುಗಳು
ಇನ್ನುಮೇಲಾದರೂ
ಅಸಹಾಯಕರ ರಕ್ಷಿಸಲು
ಹೊರಡುವಂತಾಗಲಿ.
ದೇವರನ್ನು ಮಾರಿ
ನೀವೂ ಮೌನವಾಗಿರಿ–
ಈ ನೆಲದಲ್ಲಿ
ಹೆಣ್ಣಿನ ಮಾರಾಟವಾದಾಗ
ಮೌನವಾಗಿರುವ ದೇವರಂತೆಯೇ!

● **ಪ್ರಸಾದ್ ಕೆ.ಜೆ.**

# ಕ್ಷಮೆಯಿರಲಿ

ಕಳೆದ ವರುಷದ ತನಕ
ಎಲ್ಲ ಸರಿಯಾಗಿತ್ತು.
ಬಣ್ಣದಾ ಗಣಪನಿಗೆ
ಬೇಡಿಕೆಯು ಬಹಳಿತ್ತು.
ಅಚ್ಚಿನಲಿ ಮುದ್ದಾಗಿ
ಮೂರ್ತಿ ಹೊರಬರುತ್ತಿತ್ತು
ಬಣ್ಣದಲಿ ಮಿಂದೆದ್ದು
ಸೊಗಸಿನಲಿ ಇರುತ್ತಿತ್ತು...

ಕಣ್ಣ ಮುಂದಿನ ರೂಪ
ಕರಗಿಯೇ ಹೋದಂತೆ
ಬಂತೊಂದು ಬಿರುಗಾಳಿ
ಎಲ್ಲಿಂದಲೋ ತೂರಿ
ಬದುಕನ್ನೆ ಮುಚ್ಚಿತ್ತು
ಉಸಿರಾಟ ತಗ್ಗಿತ್ತು
ಸಂತಸವು ಸೊರಗುತ್ತ
ಬಣ್ಣಗಳ ಕದಡಿತ್ತು...
ಮತ್ತೆ ನಿರ್ಮಿಸಬೇಕು
ಮಸುಕಾದ ಬದುಕನ್ನು
ಸಹಿಸಬೇಕಿದೆ.

ಕಷ್ಟದಾ ದಿನಗಳನು
ಇಂದು ಕಾಪಿಟ್ಟಿದ್ದು
ಮುಂದೆ ದಕ್ಕುವುದು
ನಿಮ್ಮನುಳಿಸಿದರೆ
ನಾಳೆಗಳು ಸಿಕ್ಕೀತು
ಕ್ಷಮೆಯಿರಲಿ ನಮ್ಮಲ್ಲಿ
ಮುಚ್ಚಬೇಕಿದೆ ನಿಮ್ಮ
ಕ್ಷಮೆಯಿರಲಿ ಎಲ್ಲಕೂ
ಮತ್ತೆ ಮತ್ತೆ...
ಹಚ್ಚಲಾರೆವು ಬಣ್ಣ.

● **ಸುಬ್ಬಲಕ್ಷ್ಮಿ ಎಚ್.ಕೆ.**